## ಆಯುಕ್ತರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
## ರೊದ್ದ ರಸ್ತೆ, ಧಾರವಾಡ 580 008

ಸಂಖ್ಯೆ: ಸಿ2::ಸಿಬ್ಬಂದಿ:ಬಡ್ತಿ:ಪಸ:27:2008–09 ದಿನಾಂಕ: 9–12–2016

### ಅಧಿಸೂಚನೆ

ವಿಷಯ: ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯವರಿಗೆ ಪತ್ರಾಂಕಿತ ಸಹಾಯಕರ ಹುದ್ದೆಗಳಿಗೆ ಸ್ಥಾನಾಪನ್ನ ಬಡ್ತಿ ನೀಡುವ ಕುರಿತು.

ಉಲ್ಲೇಖ:1.ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್:22:ಎಸ್‌ಬಿಸಿ:79 ದಿನಾಂಕ: 30–8–1979
2.ಸರ್ಕಾರಿ ಆದೇಶ ಸಂಖ್ಯೆ ಇಡಿ:250:ಡಿಪಿಐ:2006 ದಿನಾಂಕ: 22–2–2008
3.ಸರ್ಕಾರಿ ಸುತ್ತೋಲೆ ಸಂಖ್ಯೆ ಇಡಿ:464:ಡಿಪಿಐ:2008 ದಿನಾಂಕ: 6–1–2009
4.ಪತ್ರಾಂಕಿತ ವ್ಯವಸ್ಥಾಪಕರ ಜೇಷ್ಠತಾ ಪಟ್ಟಿ ಪ್ರಕಟಣೆ ದಿನಾಂಕ: 23–9–2010
5.ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡುವಳಿ ದಿನಾಂಕ: 3–12–2016.

<u>ಪ್ರಸ್ತಾವನೆ:</u>

ಈ ಕಛೇರಿ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪತ್ರಾಂಕಿತ ವ್ಯವಸ್ಥಾಪಕರ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (4) ರ ಪ್ರಕಾರ ಪ್ರಕಟಿಸಲಾಗಿದೆ. ಪತ್ರಾಂಕಿತ ಸಹಾಯಕರ ಖಾಲಿ ಹುದ್ದೆಗಳ ಲಭ್ಯತೆ ಆಧಾರದ ಮೇಲೆ ಮತ್ತು ಉಲ್ಲೇಖ (1) ರ ಪ್ರಕಾರ ಮೀಸಲಾತಿ ಆಧರಿಸಿ ಬಡ್ತಿಗೆ ಅರ್ಹತೆ ಹೊಂದಿದ ಪತ್ರಾಂಕಿತ ವ್ಯವಸ್ಥಾಪಕರಿಗೆ ಉಲ್ಲೇಖ (1)(2) ಹಾಗೂ (3) ರ ಆದೇಶಗಳನ್ವಯ ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಗೆ ಬಡ್ತಿ ನೀಡುವ ಕುರಿತು ಪರಿಗಣಿಸಿ ಈ ಮೇಲ್ಕಂಡ ಉಲ್ಲೇಖ (5) ರನ್ವಯ ಇಲಾಖಾ ಮುಂಬಡ್ತಿ ಸಭೆಯಲ್ಲಿ ಚರ್ಚಿಸಿ ಸಭೆ ನಡಾವಳಿ ನಿರ್ಣಯಿಸಿದಂತೆ ಈ ಕೆಳಕಂಡ ಅನುಬಂಧದಲ್ಲಿ ತೋರಿಸಿರುವ ಪತ್ರಾಂಕಿತ ವ್ಯವಸ್ಥಾಪಕರ ವೇತನ ಶ್ರೇಣಿ 21600–40050 ರಿಂದ ಪತ್ರಾಂಕಿತ ಸಹಾಯಕರ ಹುದ್ದೆಯ ವೇತನ ಶ್ರೇಣಿ 22800–43200 ರಲ್ಲಿ ಸ್ಥಾನಾಪನ್ನ ಬಡ್ತಿ ನೀಡುವ ಕುರಿತು ಈ ಕೆಳಕಂಡಂತೆ ಆದೇಶಿಸಿದೆ.

<u>ಆದೇಶ:</u>

ಮೇಲ್ಕಂಡ ಉಲ್ಲೇಖಗಳನ್ವಯ ಜೇಷ್ಠತೆ/ಮೀಸಲಾತಿ ಆಧರಿಸಿ ಮತ್ತು ಇಲಾಖಾ ಮುಂಬಡ್ತಿ ಸಭೆಯಲ್ಲಿ ನಿರ್ಣಯಿಸಿದಂತೆ ಈ ಕೆಳಕಂಡಂತೆ ನಮೂದಿಸಿರುವ ಅಧೀಕ್ಷಕರಿಗೆ ಪ್ರಸ್ತುತ ಪಡೆಯುತ್ತಿರುವ ವೇತನ ಶ್ರೇಣಿ 21600–40050 ರಿಂದ ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಯ **ವೇತನ ಶ್ರೇಣಿ 22800–600–24600–700–28800–800–33600–900–39000–1050–43200** ರಲ್ಲಿ ಸ್ಥಾನಾಪನ್ನ ಬಡ್ತಿಯನ್ನು ಕೌನ್ಸಿಲಿಂಗ್ ಮೂಲಕ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಸ್ವತ: ಸ್ಥಳ ಆಯ್ಕೆ ಮಾಡಿಕೊಂಡ ಅವರ ಹೆಸರಿನ ಮುಂದೆ ಸೂಚಿಸಿದ ಕಛೇರಿಗೆ ಸ್ಥಳ ನಿಯುಕ್ತಿಗೊಳಿಸಿ ಬಡ್ತಿ ನೀಡಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ ಮತ್ತು ಸ್ಥಳ | ಪದೋನ್ನತಿಗೊಳಿಸಿ ನಿಯುಕ್ತಿಗೊಳಿಸಿದ ಹುದ್ದೆ ಮತ್ತು ಸ್ಥಳ |
|---|---|---|
| 01 | ಶ್ರೀ ರಾಮಪ್ಪ ಬಾಬು ದೊಡಮನಿ ಪತ್ರಾಂಕಿತ ವ್ಯವಸ್ಥಾಪಕರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ವಿಜಯಪುರ ಗ್ರಾಮೀಣ ವಿಜಯಪುರ | ಪತ್ರಾಂಕಿತ ಸಹಾಯಕರು, ಉಪನಿರ್ದೇಶಕರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ವಿಜಯಪುರ |
| 02 | ಶ್ರೀ ಎಸ್.ಎಂ.ಅಯಾಚಿತ ಪತ್ರಾಂಕಿತ ವ್ಯವಸ್ಥಾಪಕರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕಾಗವಾಡ ವಲಯ ಕಾಗವಾಡ ತಾ:ಅಥಣಿ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ | ಪತ್ರಾಂಕಿತ ಸಹಾಯಕರು ಉಪನಿರ್ದೇಶಕರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಕಾರವಾರ |

ಷರತ್ತುಗಳು:

1. ಬಡ್ತಿ ಆದೇಶವು ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ದಾಖಲಾಗಿರುವ ಅರ್ಜಿ ಸಂಖ್ಯೆ 70953–963 ರ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.
2. ಬಡ್ತಿ ಹೊಂದಿದ ಸಿಬ್ಬಂದಿಯವರನ್ನು ಒಂದು ವಾರದೊಳಗಾಗಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳದಿಂದ ಬಿಡುಗಡೆ/ಹಾಜರಪಡಿಸಿಕೊಳ್ಳುವುದನ್ನು ಪೂರ್ಣಗೊಳಿಸುವದು ಹಾಗೂ ಈ ಕಛೇರಿಗೆ ವರದಿಸುವದು.
3. ಬಡ್ತಿಗೆ ಅರ್ಹ ಸಿಬ್ಬಂದಿಯವರು ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡಿರುವ ಪ್ರಯುಕ್ತ ಯಾವುದೇ ವರ್ಗಾವಣೆ ಭತ್ಯೆ ಅಥವಾ ಸೇರುವಿಕೆಯ ಕಾಲಕ್ಕೆ ಅರ್ಹರಿರುವುದಿಲ್ಲ.

4. ಕೌನ್ಸಿಲಿಂಗ್ ಮೂಲಕ ಬಡ್ತಿ ಸ್ಥಳ ಆಯ್ಕೆ ಮಾಡಿಕೊಂಡಿರುವ ಪ್ರಯುಕ್ತ ಸ್ಥಳ ಮಾರ್ಪಾಡಿಸಲು ಅವಕಾಶವಿರುವುದಿಲ್ಲ ಹಾಗೂ ಬಡ್ತಿ ಮಾರ್ಪಾಡಿಗೆ ಯಾವುದೇ ರೀತಿಯ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಭಾವ/ಒತ್ತಡ ತಂದಲ್ಲಿ ಬಡ್ತಿಯನ್ನು ರದ್ದುಪಡಿಸುವುದಲ್ಲದೇ ಸ್ಥಾನಾಪನ್ನ ಬಡ್ತಿ ಹೊಂದಲು ಇಚ್ಛೆ ಇರುವುದಿಲ್ಲವೆಂದು ಭಾವಿಸುವುದರ ಮೂಲಕ ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಾವಳಿಗಳು 1966 ರನ್ವಯ ಕ್ರಮ ಕೈಗೊಳ್ಳಲಾಗುವದು.

(ವೀರಣ್ಣ ಜಿ ತುರಮರಿ) 9/12
ಅಪರ ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ
ಧಾರವಾಡ

ಗೆ,

1.ಸಂಬಂಧಿಸಿದ ಸಿಬ್ಬಂದಿಯವರಿಗೆ

2.ಸಂಬಂಧಿಸಿದ ಕಛೇರಿ ಮುಖ್ಯಸ್ಥರುಗಳಿಗೆ

3.ವಿಭಾಗದ ಎಲ್ಲ ಉಪನಿರ್ದೇಶಕರು (ಆಡಳಿತ)

ಪ್ರತಿ ಮಾಹಿತಿಗಾಗಿ ಗೌರವಪೂರ್ವಕವಾಗಿ

1.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕರ್ನಾಟಕ ಸರ್ಕಾರದ ಸಚಿವಾಲಯ ಬಹುಮಹಡಿ ಕಟ್ಟಡ ಬೆಂಗಳೂರು.

2.ಮಾನ್ಯ ಮಹಾಲೇಖಾಪಾಲರು ಬೆಂಗಳೂರು ಇವರಿಗೆ ಕ್ರಮಕ್ಕಾಗಿ.